

ಡಾ.ವಿನೋದ ಛೆಬ್ಬಿ

**ಮುಪ್ಪಿನಲ್ಲಿ ಮಕ್ಕಳ ನಿರ್ಲಕ್ಷ್ಯಕ್ಕೆ ಒಳಗಾಗಿ ದಯಾಮರಣ ಬಯಸುವವರ ದೈನ್ಯತೆಯ ಮೂಲವೆಲ್ಲಿ?**

# 335: ಹೊಸ ದಾರಿ - 75

ಅಂತ್ಯಕಾಲದ ದೈನ್ಯತೆಯ ಬಗೆಗೆ ಮಾತಾಡಿದ್ದೆನಷ್ಟೆ? ಇದಕ್ಕೆ ಕೆಲವರು ಸ್ಪಂದಿಸಿದ್ದಾರೆ. ಮಕ್ಕಳಿಂದ ಅಲಕ್ಷಿಸಲ್ಪಟ್ಟು ದೈನ್ಯಾವಸ್ಥೆಗೆ ಒಳಗಾದ ಹಲವಾರು ತಾಯ್ತಂದೆಯರ ಪ್ರಸಂಗಗಳನ್ನು ಉದಾಹರಿಸುತ್ತ, ಮಕ್ಕಳು ಹಿರಿಯರ ಕಾಳಜಿ ಮಾಡುವುದು ಒತ್ತಟ್ಟಿಗಿರಲಿ, ಅವರ ಆಸ್ತಿಯ ಮೇಲೆ ಕಣ್ಣು ಹಾಕುತ್ತ, ಆಸ್ತಿ ಬರೆದುಕೊಟ್ಟರೆ ಮಾತ್ರ ನೋಡಿಕೊಳ್ಳುತ್ತೇವೆ ಎಂದು ಸಾಧಿಸುತ್ತಿದ್ದಾರೆ. ವೃದ್ಧರು ನಂಬದೆ ಅಸಹಾಯರಾಗಿ ಕರುಣಾ ಮರಣ ಬಯಸುತ್ತಿದ್ದಾರೆ. ಇಂಥವರಿಗೆ ದೈನ್ಯತೆ ಸೂಕ್ತವೆನ್ನುವುದು ಸೂಕ್ತವೆ?

ನಿಜ, ಬೀದಿಪಾಲಾದ ಇಳಿವಯಸ್ಕರನ್ನು ನಾನೂ ಕಂಡಿದ್ದೇನೆ. ಮಕ್ಕಳು ಏಕಾಯೇಕಿ ದೂರ ಸಿಡಿಯುವ ಈ ಸಮಸ್ಯೆಯ ಹೊಳಹುಗಳನ್ನು ನೋಡೋಣ. ಮೊದಲೊಂದು ದೃಷ್ಟಾಂತ:

ಹಿರಿಯರೊಬ್ಬರು ಮಗನನ್ನು ನನ್ನಲ್ಲಿ ಕರೆತಂದಿದ್ದರು. ಸಮಸ್ಯೆ? ಮೂವತ್ತೆರಡಾದರೂ ಮದುವೆಯಾಗಲು ಒಪ್ಪುತ್ತಿಲ್ಲ. ಅವನ ವ್ಯವಹಾರ ಜ್ಞಾನವಿಲ್ಲದ ಅತಿಮುಗ್ಧತೆಯನ್ನು ನೋಡಿದರೆ ಬುದ್ಧಿಮಾಂದ್ಯನಂತೆ ಕಾಣುತ್ತಿತ್ತು. ಆದರೆ ಅವನೋ ವಾಸ್ತವವಾಗಿ ಸಿ.ಎ. ಓದಿ ದೊಡ್ಡ ಹುದ್ದೆ ಹೊಂದಿದ್ದ. ಮದುವೆ ಬೇಡವೆನ್ನುವುದಕ್ಕೆ ಕಾರಣ ಕೇಳಿದಾಗ ಹೊರಬಂದದ್ದು ವಿಚಿತ್ರವೂ ಆಘಾತಕರವೂ ಆಗಿತ್ತು. ಇವನು ಚಿಕ್ಕವನಿರುವಾಗ ಅಪಸ್ಮಾರಕ್ಕೆ (convulsions) ಒಳಗಾಗುತ್ತಿದ್ದ. ಹೀಗಾಗಿ ತಾಯ್ತಂದೆಯರ ತೊಡೆಬಿಟ್ಟು ಇಳಿಯಲಿಲ್ಲ. ಈಗಲೂ ಅವರೊಡನೆಯ ನಂಟು ಎಷ್ಟಿದೆಯೆಂದರೆ ತಾನು ಸ್ವತಂತ್ರ ವ್ಯಕ್ತಿಯೆಂದು ಭಾವಿಸಿಯೇ ಇಲ್ಲ. ತಾಯ್ತಂದೆಯರ ಸೇವೆಗೆ ದಾಂಪತ್ಯ ಅಡ್ಡಿಯಾಗುತ್ತದೆ ಎಂದ. ಒಂದು ವಯಸ್ಸಾದ ನಂತರ ಅವರು ಇಲ್ಲವಾಗುವಾಗ ಮುಂದೇನು ಎಂದಿದ್ದಕ್ಕೆ ಅವನು ನಿರ್ಭಾವುಕವಾಗಿ ಹೇಳಿದ್ದು: 'ಡಾಕ್ಟರ್, ಈ ಮಾತು ನಮ್ಮಲ್ಲೇ ಇರಲಿ: ಅವರ ನಂತರ ನಾನೂ ಬದುಕನ್ನು ಕೊನೆಗೊಳಿಸುತ್ತೇನೆ.'

ಈ ತರುಣನಲ್ಲಿರುವ ಅತಿರೇಕದ ಅಂಶವನ್ನು ಬದಿಗಿಟ್ಟು ಯೋಚಿಸೋಣ: ಇವನು ಹೆತ್ತವರ ಸೇವೆಗೆ ತನ್ನ ಬದುಕನ್ನು ಮೀಸಲಾಗಿಡುವುದಕ್ಕೆ ಕಾರಣ ತಾಯ್ತಂದೆಯರು ತೋರಿಸಿದ ಪರಿಪೂರ್ಣಪ್ರೀತಿಯ ಸಹಜ ಫಲಶ್ರುತಿ ಎಂದೆನಿಸುತ್ತದೆ. ಪ್ರಶ್ನೆಯೇನೆಂದರೆ, ಎಲ್ಲ ಮಕ್ಕಳಿಗೂ ಸಹಜವಾಗಿಯೇ ಬರಬೇಕಾದ ಇದು, 'ತಾಯ್ತಂದೆಯರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ' ಎಂದು ಕರ್ತವ್ಯದ ರೂಪ ಧರಿಸಿದ್ದು ಯಾವಾಗ ಹಾಗೂ ಹೇಗೆ? ಉತ್ತರಕ್ಕೆ ದೂರ ಹೋಗಬೇಕಾಗಿಲ್ಲ: ಶ್ರೀರಾಮನ ಉದಾಹರಣೆ ನಮ್ಮ ಪರಂಪರೆಯುದ್ದಕ್ಕೂ ಜ್ವಲಂತವಾಗಿದೆ.

ಶ್ರೀರಾಮನು ಪತ್ನಿಯೊಡನೆ ಇನ್ನೇನು ಪಟ್ಟವೇರಬೇಕು ಎನ್ನುವಾಗ ತಂದೆಯ ಆಣತಿಯಂತೆ ದಿಕ್ಕುಬದಲಿಸಿ ಹದಿನಾಲ್ಕು ವರ್ಷ ವನವಾಸಕ್ಕೆ ಹೊರಡುತ್ತಾನೆ. (ನೆನಪಿಡಿ: ಹದಿನಾಲ್ಕು ವರ್ಷವೆಂದರೆ ಕೊಲೆಗಡುಕರಿಗೆ ಕೊಡುವ ಜೀವಾವಧಿ ಶಿಕ್ಷೆಗೆ ಸಮ!). ಇದನ್ನೇ ನಾವು ವಿಧೇಯತೆ, ಆದರ್ಶವೆಂದು ಮೆಚ್ಚುತ್ತೇವೆ. ಇಲ್ಲಿ ಶ್ರೀರಾಮ ನಡೆದುಕೊಂಡದ್ದನ್ನು ಬದಿಗಿಟ್ಟು ಇದನ್ನು ಅನುಗ್ರಹಿಸಿದ ದಶರಥನ ಮನೋಭಾವವನ್ನು ನೋಡೋಣ. ಅವನು ಕೈಕೇಯಿಗೆ, 'ಮಕ್ಕಳಿಗೂ ನಾಡಿಗೂ ಅನ್ಯಾಯ ಬಗೆಯಲಾರೆ – ದಾಂಪತ್ಯ ಮುರಿದರೂ, ವಚನಭ್ರಷ್ಟ ಎನಿಸಿಕೊಂಡರೂ ಸರಿ!' ಎಂದೆನ್ನಬಹುದಿತ್ತು. ಹಾಗಿದ್ದರೂ ಪತ್ನೀವ್ಯಾಮೋಹಕ್ಕೆ ಒಳಗಾಗಿ ಮಗನ ಭವಿಷ್ಯವನ್ನು ಬಲಿಹಾಕುವ ದಶರಥನು ಹಿರಿಯರು ಸ್ವಾರ್ಥಕ್ಕಾಗಿ ಮಕ್ಕಳನ್ನು ಬಳಸಿಕೊಳ್ಳುವುದಕ್ಕೆ ದುರಂತ ದೃಷ್ಟಾಂತ. ಇತ್ತ ರಾಮನಿಗೆ ಏನೆನಿಸಿರಬಹುದು? (ಯಾವ ತಪ್ಪಿಗಾಗಿ ನನಗೀ ಶಿಕ್ಷೆ?) ತನ್ನದಲ್ಲದ ಹೊಣೆಯನ್ನು ನಿರ್ವಹಿಸುವುದಕ್ಕಾಗಿ ಬಂಧುಬಳಗ, ಅರಸೊತ್ತಿಗೆ, ನಾಡು– ಎಲ್ಲದರಿಂದಲೂ ದೂರವಾಗಿ, ಒಂಟಿತನ ಕಾಡಿನಲ್ಲಿ ಕಾಡಿರಲೇಬೇಕು. ಅವನ ದುರವಸ್ಥೆ ತಂದೆಯ ಕಾರಣದಿಂದ ಮಾತ್ರ. ಹಾಗಾಗಿ ನಾವು ಗಣಿಸಬೇಕಾಗಿರುವುದು ರಾಮನ ವಿಧೇಯತೆಯನ್ನಲ್ಲ, ದಶರಥನ ಕ್ರೌರ್ಯವನ್ನು ಎಂದು ನನಗೆ ಅನಿಸುತ್ತದೆ.

ಹೀಗೆ ಸಾಕಷ್ಟು ತಾಯ್ತಂದೆಯರು ತಮ್ಮ ಕನಸುಗಳನ್ನೂ ಬೇಡಿಕೆಗಳನ್ನೂ ಗೊತ್ತಿದ್ದೋ ಗೊತ್ತಿಲ್ಲದೆಯೋ ಮಕ್ಕಳ ಮೇಲೆ ಹೇರುತ್ತ ದಶರಥ ಆಗುತ್ತಾರೆ; ಪ್ರತಿಯಾಗಿ ತಮ್ಮ ಮಕ್ಕಳು ರಾಮನಾಗಲು ನಿರೀಕ್ಷಿಸುತ್ತಾರೆ. ವ್ಯತ್ಯಾಸವೇನೆಂದರೆ, ಈಗಿನ ಮಕ್ಕಳು ವಿಧೇಯತೆಯ ಬದಲು ಪ್ರತಿಭಟನೆ ತೋರುತ್ತಾರೆ. ಅದಕ್ಕೆ ದೊಡ್ಡವರ ಹಕ್ಕೊತ್ತಾಯ. ಸ್ಪಂದನೆ ಸಿಗದೆ ಮಕ್ಕಳು ಕೈಬಿಟ್ಟರೆಂದು ದೈನ್ಯತೆ ಅನುಭವಿಸುತ್ತಾರೆ. ದೈನ್ಯತೆಗೆ ಯಾರು ಕಾರಣ ಗೊತ್ತಾಯಿತಲ್ಲ?

'ಕೆಟ್ಟ ಮಕ್ಕಳು ಇರಬಹುದೇ ಹೊರತು ಕೆಟ್ಟ ತಾಯಿ ಇರಲಾರಳು' ಎಂಬ ನಂಬಿಕೆಯನ್ನು ನಾನೊಪ್ಪುವುದಿಲ್ಲ. ನಾನು ಕಂಡಂತೆ ಹೀನ ವ್ಯಕ್ತಿತ್ವ ಹೊಂದಿ ಸ್ವತಃ ತನ್ನನ್ನೇ ದ್ವೇಷಿಸುವವರ ಹಿಂದೆ ತಾಯ್ತಂದೆಯರು ನಡೆಸಿದ ಕ್ರೌರ್ಯದ ಇತಿಹಾಸವಿದೆ. ತಾಯ್ತಂದೆಯರು ತಮ್ಮನ್ನು ಪ್ರೀತಿಸದಿದ್ದರೆ ಮಕ್ಕಳು ಅವರನ್ನು ಬೈದುಕೊಳ್ಳುವುದಿಲ್ಲ; ತಾನೇ ಪ್ರೀತಿಗೆ ಅನರ್ಹ ಎಂದುಕೊಂಡು ದುಃಖಿಸುತ್ತಾರೆ ಎಂದು ಮುಂಚೆ ಹೇಳಿದ್ದೆ. ಹೀಗೆ ವಂಚಿತರಾದ ಮಕ್ಕಳು ಬೆಳೆದಂತೆ ದೂರವಾಗುವುದು ಸಹಜವಾಗುತ್ತದೆ. ಇದಕ್ಕೆ ಮಕ್ಕಳು ತಮ್ಮನ್ನು ಅಲಕ್ಷಿಸುತ್ತಿದ್ದಾರೆ ಎಂದು ಹಿರಿಯರು ಅರ್ಥಹಚ್ಚುತ್ತಾರೆ.

ಇನ್ನು ಆಸ್ತಿಗೂ ಒಂದು ಅಂತರಾಳವಿದೆ. ಅನೇಕರು ಆಸ್ತಿಗಾಗಿ ದುಡಿಯುವಾಗ ಮಕ್ಕಳೊಡನೆ ಬೆರೆಯಲು ಸಾಧ್ಯವಾಗುವುದಿಲ್ಲ. ಹಿರಿಯರ ಗಮನವನ್ನು ಕಳೆದುಕೊಂಡ ಮಕ್ಕಳು ಅದಕ್ಕೆ ಕಾರಣೀಭೂತವಾದ ಆಸ್ತಿಯನ್ನು ಅಸಹನೆಯಿಂದ ನೋಡುತ್ತಾರೆ. ಹೆತ್ತವರು ತನಗಿಂತ ಆಸ್ತಿಯನ್ನೇ ಹೆಚ್ಚು ಪ್ರೀತಿಸುತ್ತಾರೆಂದು ಮತ್ಸರಿಸುತ್ತಾರೆ. ಹಾಗೆಂದೇ ದೊಡ್ಡವರಾದ ನಂತರ, 'ನೀನು ಪ್ರೀತಿಯನ್ನು ಕೊಡಲಿಲ್ಲ, ಕಡೆಯಪಕ್ಷ ನೀನು ಪ್ರೀತಿಸುವ ಆಸ್ತಿಯನ್ನಾದರೂ ಕೊಟ್ಟು ನಿನ್ನ ಪ್ರೀತಿಯನ್ನು ಸಿದ್ಧಪಡಿಸು'. ಎಂದು ಸವಾಲು ಒಡ್ಡುತ್ತಾರೆ. ಇಲ್ಲಿ ಕಾಣುವುದು ಹೆಚ್ಚಿನಂಶ ಆಸ್ತಿಯ ಮೇಲೆ ಕಣ್ಣಲ್ಲ, ಪ್ರೀತಿಗಾಗಿ ಹಕ್ಕೊತ್ತಾಯವಷ್ಟೆ. ನಿಜಾಂಶ ಏನೆಂದರೆ, ಪ್ರೀತಿ ಹಾಗೂ ಆಸ್ತಿ ವಿನಿಮಯದ ಸರಕಲ್ಲ. ಹಾಗಾಗಿ ಆಸ್ತಿ ಒಪ್ಪಿಸಿಕೊಟ್ಟರೂ ಸ್ವೀಕೃತರಾಗದೆ ದೈನ್ಯತೆಯೇ ಗತಿಯಾಗುತ್ತದೆ.

ಹಾಗಾದರೆ ಪರಿಹಾರ? ನನಗೆ ತಿಳಿದಂತೆ ಇದಕ್ಕೊಂದೇ ಮಾರ್ಗವಿದೆ: ಹಿರಿಯರು ಆತ್ಮಶೋಧನೆ ನಡೆಸುವುದು. ಮಕ್ಕಳು ಚಿಕ್ಕವರಿರುವಾಗ ನಿಷ್ಕಾಮದಿಂದ ಪ್ರೀತಿಸಿದೆನೇ ಎಂದು ಕೇಳಿಕೊಳ್ಳಿ. ಅವರನ್ನು ಯಾವಯಾವ ರೀತಿ ಉಪೇಕ್ಷಿಸಿದೆ, ಕಿರಿಕಿರಿ ಮಾಡಿದೆ ಎಂದು ಯೋಚಿಸುತ್ತ ಅತಿಚಿಕ್ಕ ವಿಷಯವನ್ನೂ ಪಟ್ಟಿಮಾಡಿ: ಮಕ್ಕಳ ಕರೆಯನ್ನು ಅಲಕ್ಷಿಸಿ ಕೆಲಸಕ್ಕೆ ಹೋಗಿದ್ದು; ಅರಿಯದೆ ಮಾಡಿದ ಕೃತ್ಯಕ್ಕೆ ಶಿಕ್ಷಿಸಿದ್ದು; ನಿಮ್ಮ ಕನಸುಗಳಿಗೆ ಅವರನ್ನು ಹೊಣೆಮಾಡಿದ್ದು; ಅವರ ಸೃಜನಶೀಲತೆಗೆ ಅಡ್ಡಿಯಾಗಿದ್ದು; ನೀನು ಮುಖ್ಯವಲ್ಲ, ನಿನ್ನ ಸಾಧನೆ ಮುಖ್ಯವೆಂದು ತೋರಿಸಿದ್ದು; ಮೈಮಾಟಬಣ್ಣ, ಓದು ಇಂಥದ್ದರಲ್ಲಿ ಇತರ ಮಕ್ಕಳಿಗೆ ಹೋಲಿಸಿದ್ದು ಇತ್ಯಾದಿ. (ಏನನ್ನೇ ಸಾಧಿಸಲಿ, 'ನಿನ್ನಣ್ಣನಂತೆ ನೀನೂ!' ಎಂದು ಮೆಚ್ಚಿಸಿಕೊಂಡವಳು ಸ್ವಂತಿಕೆಗೆ ಬೆಲೆಸಿಗದೆ ದೊಡ್ಡವಳಾಗಿ ಈಗ ಕುಟುಂಬವನ್ನೇ ದ್ವೇಷಿಸುತ್ತಿದ್ದಾಳೆ.) ಚಿಕ್ಕದಾಗಿ ಹೇಳಬೇಕೆಂದರೆ, 'ಮಗೂ ನೀನು ಹುಟ್ಟಿದ್ದೇ ನಮ್ಮ ಭಾಗ್ಯ' ಎಂದು ತಲೆಯಮೇಲೆ ಹೊತ್ತುಕೊಂಡು ಕುಣಿಯದೆ ಇದ್ದರೆ, ಮಕ್ಕಳು ನಿಮ್ಮನ್ನು ನೋಡಿಕೊಳ್ಳುತ್ತಿರುವುದಕ್ಕೆ ಕಾರಣ ಅವರ ಹೃದಯವಂತಿಕೆ ಎಂದುಕೊಳ್ಳಿ!

ಇನ್ನು, ನಿಮ್ಮ ದೈನ್ಯತೆಯನ್ನು ಹೇಗೆ ನಿರ್ವಹಿಸುವುದು? ಮಕ್ಕಳನ್ನೇ ಕೇಳಿ: 'ನಾನು ಆತ್ಮಶೋಧನೆ ಮಾಡಿಕೊಳ್ಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಿಮಗೆ ಏನೇನು ಅನ್ಯಾಯ, ಅಲಕ್ಷ್ಯ ಮಾಡಿದೆ, ಎಂದು ನಿಸ್ಸಂಕೋಚದಿಂದ ಹೇಳುತ್ತೀರಾ?' ಅವರೇ ನಿಮ್ಮ ನಡತೆಯ ಬಗೆಗೆ ಹೇಳುವಾಗ ಸಂದೇಹಿಸದೆ ನಂಬಿ. ಯಾಕೆ? ಅದು ಅವರ ಅನಿಸಿಕೆ– ಅದನ್ನು ನಿಮ್ಮ ಕೃತ್ಯದ ಉದ್ದೇಶದಿಂದ ಅಳೆಯಲಾಗದು. ಅವರ ವಿಶ್ವಾಸಕ್ಕೆ ಅರ್ಹರಾಗಬೇಕಿದ್ದರೆ ದೈನ್ಯರಾಗುವುದೊಂದೇ ಉಪಾಯ!

ಈಗ, ಇಳಿವಯಸ್ಸಿನ ದೈನ್ಯತೆಯನ್ನು ಒಪ್ಪಿಕೊಳ್ಳಲು ಮನಸ್ಸು ಮಾಡುತ್ತೀರಾ?

ಸಂಪರ್ಕಕ್ಕೆ: 8494933888;
Email: vinod.chebbi@gmail.com